ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಬುಧವಾರ, ೨೭, ಮೇ, ೨೦೨೬ (ಜ್ಯೇಷ್ಠ, ೦೬, ಶಕವರ್ಷ, ೧೯೪೮)	ಸಂಚಿಕೆ ೧೦೦
Volume - 161	BENGALURU, WEDNESDAY, 27, MAY, 2026 (JYAISTHA , 06, SHAKAVARSHA, 1948)	Issue 100

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ.20 ರಲ್ಲಿ 5-00 ಎಕರೆ ಮತ್ತು 25 ರಲ್ಲಿ 3-00 ಎಕರೆ ಒಟ್ಟು 8-00 ಎಕರೆ ಸರ್ಕಾರಿ ಗೋಮಾಳ ಜಮೀನನ್ನು ಮಾತೃ ಎಜುಕೇಷನ್ (ರಿ) ಸಂಸ್ಥೆಗೆ ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಿ ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಪತ್ರ ಸಂಖ್ಯೆ: ಆರ್ ಡಿ 36 ಎಲ್ ಜಿ ಬಿ 2004 ದಿನಾಂಕ:10.02.2004
2. ಸರ್ಕಾರದ ಪತ್ರ ಸಂಖ್ಯೆ: ಆರ್ ಡಿ 262ಎಲ್ ಜಿ ಬಿ 2014 ದಿನಾಂಕ:02.06.2015
3. ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್ ಎನ್‌ಡಿ(ಎನ್)ಸಿ.ಆರ್:185/2003-04 ದಿನಾಂಕ:18.12.2019
4. ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ: ಆರ್ ಡಿ 17 ಎಲ್ ಜಿ ಬಿ 2020 ದಿನಾಂಕ:08/02/2021.
5. ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ: ಆರ್ ಡಿ 17 ಎಲ್ ಜಿ ಬಿ 2020 ದಿನಾಂಕ:25.03.2025.

****

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.(1) ರ ಪತ್ರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ.20 ರಲ್ಲಿ 5-00 ಎಕರೆ ಮತ್ತು 25 ರಲ್ಲಿ 3-00 ಎಕರೆ ಒಟ್ಟು 8-00 ಎಕರೆ ಸರ್ಕಾರಿ ಗೋಮಾಳ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ರ ನಿಯಮ 97(4) ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿ ಸಂ:25310:01 ಮೇಲಿನ ನ್ಯಾಯಾಲಯದ ಅಂತಿಮ ತೀರ್ಪಿಗೆ ಬದ್ಧರಾಗುವ ಷರತ್ತನ್ನು ವಿಧಿಸಿ, ಮಾತೃ ಎಜುಕೇಷನ್ (ರಿ) ಸಂಸ್ಥೆಗೆ ಶೈಕ್ಷಣಿಕ ಉದ್ದೇಕ್ಕಾಗಿ ಕರ್ನಾಟಕ ಭೂ ಮಂಜೂರಾತಿ

ನಿಯಮಾವಳಿ 1969 ರ ನಿಯಮ 19 ರನ್ವಯ 30 ವರ್ಷಗಳ ಅವಧಿಗೆ ಎಕರೆ ಒಂದಕ್ಕೆ ವಾರ್ಷಿಕ ರೂ-5,000-00 (ಐದು ಸಾವಿರ ರೂಪಾಯಿಗಳು ಮಾತ್ರ) ಗುತ್ತಿಗೆ ದರ ವಿಧಿಸಿ ಮಂಜೂರು ಮಾಡಲು ಸರ್ಕಾರದ ಪೂರ್ವಾನುಮೋದನೆ ನೀಡಲಾಗಿದೆ.

ಮೇಲೆ ಓದಲಾದ ಕ್ರ.ಸಂ.(2)ರ ಪತ್ರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.20 ರಲ್ಲಿ 5-00 ಎಕರೆ ಮತ್ತು ಸರ್ವೆ ನಂ.25 ರಲ್ಲಿ 3-00 ಎಕರೆ ಒಟ್ಟು 8-00 ಎಕರೆ ಜಮೀನನ್ನು ಮಾತೃ ಎಜುಕೇಷನ್ ಟ್ರಸ್ಟ್ ಇವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿತ್ತು. ಸದರಿ ಮಂಜೂರು ಮಾಡಿರುವ ಜಮೀನನ್ನು ಸಂಸ್ಥೆಯು ಎರಡು ವರ್ಷದೊಳಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬೇಕಾಗಿತ್ತು. ಆದರೆ ಸಂಸ್ಥೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರೊಡನೆ ಪತ್ರ ವ್ಯವಹಾರ ನಡೆಯುತ್ತಿದ್ದ ಕಾರಣ ಮಂಜೂರಾಗಿರುವ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಾಧ್ಯವಾಗಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಪರಿಶೀಲಿಸಿ, ಸದರಿ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸಲು ಈ ಪತ್ರದ ದಿನಾಂಕದಿಂದ ಇನ್ನೂ ಎರಡು ವರ್ಷಗಳ ಕಾಲಾವಕಾಶವನ್ನು ವಿಸ್ತರಿಸಿದೆ ಎಂದು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(3)ರ ಪ್ರಸ್ತಾವನೆಯಲ್ಲಿ ಶ್ರೀ ಎಂ. ನಾಗರಾಜ್ ಮತ್ತು ಗ್ರಾಮಸ್ಥರು, ಸೋಮಶೆಟ್ಟಿಹಳ್ಳಿ,, ಇವರು ದಿನಾಂಕ: 28.05.2019ರಂದು ಮನವಿ ಸಲ್ಲಿಸಿ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ. 20ರಲ್ಲಿ 5-00 ಎಕರೆ ಮತ್ತು ಸ.ನಂ. 25 ರಲ್ಲಿ 3.00 ಎಕರೆ ಒಟ್ಟು 8.00 ಎಕರೆ ಸರ್ಕಾರಿ ಗೋಮಾಳದ ಜಮೀನನ್ನು ಗುತ್ತಿಗೆ ಪಡೆದಿರುವ ಶ್ರೀ ಮಾತೃ ಎಜುಕೇಷನ್ ಟ್ರಸ್ಟ್, ಬೆಂಗಳೂರು, ಇವರು ಷರತ್ತಿನ ಅವಧಿಯೊಳಗೆ ಉಪಯೋಗಿಸಿಕೊಳ್ಳದೇ ಇರುವುದರಿಂದ ಗುತ್ತಿಗೆಯನ್ನು ರದ್ದುಪಡಿಸುವಂತೆ ಕೋರಿರುತ್ತಾರೆ.

ಮುಂದುವರೆದು, ಜಿಲ್ಲಾಧಿಕಾರಿಯವರು, ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ ವರದಿಯಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು, ಇವರು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ. 20ರಲ್ಲಿ 5.00 ಎಕರೆ ಮತ್ತು ಸ.ನಂ. 25ರಲ್ಲಿ 3.00 ಎಕರೆ ಒಟ್ಟು 8.00 ಎಕರೆ ಸರ್ಕಾರಿ ಗೋಮಾಳದ ಜಮೀನನ್ನು ಮಾತೃ ಎಜುಕೇಷನ್ ಟ್ರಸ್ಟ್, ಬೆಂಗಳೂರು, ಇವರು 02 ವರ್ಷದ ಅವಧಿಯೊಳಗೆ ಉಪಯೋಗಿಸಿಕೊಳ್ಳದೇ ಇರುವ ಕಾರಣ 15 ವರ್ಷಗಳ ಅವಧಿಗೆ ನೀಡಿರುವ ಗುತ್ತಿಗೆ ಆದೇಶವನ್ನು ರದ್ದುಪಡಿಸಿ ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(4)ರ ಸರ್ಕಾರದ ಕಾರಣ ಕೇಳುವ ನೋಟಿಸ್‌ನಲ್ಲಿ ಸದರಿ ಸಂಸ್ಥೆಯವರು ಮಂಜೂರಾತಿ ಜಮೀನನ್ನು ಮಂಜೂರಾತಿ ಉದ್ದೇಶಕ್ಕೆ ನಿಗದಿತ ಅವಧಿಯಲ್ಲಿ ಉಪಯೋಗಿಸಿಕೊಳ್ಳದಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಶ್ರೀ ಮಾತೃ ಎಜುಕೇಷನ್ ಟ್ರಸ್ಟ್, ಸಂಸ್ಥೆಗೆ ಸರ್ಕಾರದ ಪತ್ರ ಸಂಖ್ಯೆ: ಆರ್ ಡಿ 36 ಎಲ್ ಜಿ ಬಿ 2004 ದಿನಾಂಕ:10.02.2004 ರ ಮೂಲಕ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ.20 ರಲ್ಲಿ 5-

00 ಎಕರೆ ಮತ್ತು 25 ರಲ್ಲಿ 3-00 ಎಕರೆ ಒಟ್ಟು 8-00 ಎಕರೆ ಜಮೀನಿನ ಮಂಜೂರಾತಿಯನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 25(2)ರನ್ವಯ ಗುತ್ತಿಗೆಯನ್ನು ಏಕೆ ರದ್ದುಗೊಳಿಸಬಾರದು ಎಂಬ ಬಗ್ಗೆ ನೋಟೀಸ್ ಜಾರಿಯಾದ 15 ದಿನದೊಳಗೆ ಸಮಜಾಯಿಷಿ ನೀಡುವಂತೆ ತಿಳಿಸಿ ಸದರಿ ಕಾರಣ ಕೇಳುವ ನೋಟೀಸ್ ಸಂಬಂಧಿಸಿದವರಿಗೆ ನೀಡಿ ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ, ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ತಿಳಿಸಲಾಗಿದೆ. ನಿಗದಿತ 15 ದಿನಗಳೊಳಗಾಗಿ ಪ್ರಸ್ತಾಪಿತ ಸಂಸ್ಥೆಯವರಿಂದ ಸಮಜಾಯಿಷಿ ಸ್ವೀಕೃತವಾಗಿರುವುದಿಲ್ಲ.

ಮೇಲೆ ಓದಲಾದ ಕ್ರ.ಸಂ.(5)ರಲ್ಲಿ ಸದರಿ ಸಂಸ್ಥೆಯವರಿಗೆ ಈ ನೋಟೀಸ್ ಜಾರಿಯಾದ 15 ದಿನದೊಳಗಾಗಿ ಲಿಖಿತ ಹೇಳಿಕೆ ಸ್ವೀಕೃತವಾಗದಿದ್ದಲ್ಲಿ ತಮ್ಮ ಹೇಳಿಕೆ ಏನು ಇಲ್ಲ ಎಂದು ಭಾವಿಸಿ ನಿಯಮಾನುಸಾರ ಕ್ರಮಜರುಗಿಸಲಾಗುವುದೆಂದು ತಿಳಿಸಿ ಸರ್ಕಾರದ ಅಂತಿಮ ಕಾರಣ ಕೇಳುವ ನೋಟೀಸ್‌ನ್ನು ಸಂಬಂಧಿಸಿದವರಿಗೆ ನೀಡಿ ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ, ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ತಿಳಿಸಲಾಗಿದೆ. ಅದರಂತೆ ಸಂಸ್ಥೆಯವರಿಗೆ ದಿನಾಂಕ 12.05.2025 ರಂದು ನೋಟೀಸನ್ನು ಜಾರಿಗೊಳಿಸಲಾಗಿರುತ್ತದೆ. ಆದರೆ ಸಂಸ್ಥೆಯವರಿಂದ ಯಾವುದೇ ಲಿಖಿತ ಹೇಳಿಕೆ ಸ್ವೀಕೃತವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ. 20ರಲ್ಲಿ 5.00 ಎಕರೆ ಮತ್ತು ಸ.ನಂ. 25ರಲ್ಲಿ 3.00 ಎಕರೆ ಒಟ್ಟು 8.00 ಎಕರೆ ಸರ್ಕಾರಿ ಗೋಮಾಳದ ಜಮೀನನ್ನು ಮಾತೃ ಎಜುಕೇಷನ್ ಟ್ರಸ್ಟ್, ಬೆಂಗಳೂರು, ಇವರು 02 ವರ್ಷದ ಅವಧಿಯೊಳಗೆ ಉಪಯೋಗಿಸಿಕೊಳ್ಳದೇ ಗುತ್ತಿಗೆ ಆದೇಶದ ಷರತ್ತನ್ನು ಉಲ್ಲಂಘಿಸಿರುವುದರಿಂದ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 25(2)ರನ್ವಯ ಸದರಿ ಗುತ್ತಿಗೆಯನ್ನು ರದ್ದುಪಡಿಸಲು ಹಾಗೂ ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರವು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. E Comp. No.:213577 File No.:RD-LGB/17/2020
ಬೆಂಗಳೂರು ದಿನಾಂಕ: 17.01.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ. 20ರಲ್ಲಿ 5.00 ಎಕರೆ ಮತ್ತು ಸ.ನಂ. 25ರಲ್ಲಿ 3.00 ಎಕರೆ ಒಟ್ಟು 8.00 ಎಕರೆ ಸರ್ಕಾರಿ ಗೋಮಾಳದ ಜಮೀನನ್ನು ಮಾತೃ ಎಜುಕೇಷನ್ ಟ್ರಸ್ಟ್, ಬೆಂಗಳೂರು, ಇವರು 02 ವರ್ಷದ ಅವಧಿಯೊಳಗೆ ಉಪಯೋಗಿಸಿಕೊಳ್ಳದೇ ಗುತ್ತಿಗೆ ಆದೇಶದ ಷರತ್ತನ್ನು ಉಲ್ಲಂಘಿಸಿರುವುದರಿಂದ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 25(2)ರನ್ವಯ ಸದರಿ ಗುತ್ತಿಗೆಯನ್ನು ರದ್ದುಪಡಿಸಿ ಆದೇಶಿಸಿದೆ

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ. 20ರಲ್ಲಿ 5.00 ಎಕರೆ ಮತ್ತು ಸ.ನಂ. 25ರಲ್ಲಿ 3.00 ಎಕರೆ ಒಟ್ಟು 8.00 ಎಕರೆ ಸರ್ಕಾರಿ ಗೋಮಾಳದ ಜಮೀನನ್ನು ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ಇವರು ಕೂಡಲೇ ಸರ್ಕಾರದ ಮರುವಶಕ್ಕೆ ಪಡೆಯತಕ್ಕದ್ದು.

ಮುಂದುವರೆದು ಜಿಲ್ಲಾಧಿಕಾರಿಗಳು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು,

1. ಸದರಿ ಜಮೀನನ್ನು ಎಲ್ಲಾ ಋಣಭಾರಗಳಿಂದ ಮುಕ್ತಗೊಳಿಸಿ, ಕಂದಾಯ ದಾಖಲೆಗಳಲ್ಲಿ "ಸರ್ಕಾರ" ಎಂದು ಸೂಕ್ತವಾಗಿ ನಮೂದು ಮಾಡುವುದು ಹಾಗೂ ಒತ್ತುವರಿಯಾಗದಂತೆ ಕ್ರಮವಹಿಸತಕ್ಕದ್ದು.
2. ಸದರಿ ಜಮೀನಿಗೆ ನಿಗದಿಪಡಿಸಲಾಗಿದ್ದ ವಾರ್ಷಿಕ ಗುತ್ತಿಗೆಯ ಬಾಕಿಯನ್ನು ಬಡ್ಡಿ ಸಮೇತ ಪ್ರಸ್ತಾಪಿತ ಸಂಸ್ಥೆಯಿಂದ ವಸೂಲು ಮಾಡಲು ಕ್ರಮವಹಿಸುವುದು.
3. ಮಂಜೂರಾಗಿರುವ ಜಮೀನಿನಲ್ಲಿ ಯಾವುದೇ ರೀತಿಯಲ್ಲಿ ಅತಿಕ್ರಮಣವಾಗಿದ್ದರೆ ಅತಿಕ್ರಮಣ ತೆರವುಗೊಳಿಸಲು ಸೂಕ್ತ ಕ್ರಮವಹಿಸುವುದು.
4. ಸದರಿ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಾಂತಯ್ಯ ಎಸ್‌ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-192

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ದೊಡ್ಡಕುರುಬರಹಳ್ಳಿ ಗ್ರಾಮದ ಸ.ನಂ 96 ರಲ್ಲಿ 3-00 ಎಕರೆ-ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಶ್ರೀ ಆದಿಜಾಂಬವ ಮಹಾಗುರು ಸಂಸ್ಥಾನ ಮಠ ಟ್ರಸ್ಟ್ (ರಿ) ರವರಿಗೆ ಮಂಜೂರು ಮಾಡುವ ಬಗ್ಗೆ

ಓದಲಾಗಿದೆ:
1. ಜಿಲ್ಲಾಧಿಕಾರಿ ಚಿಕ್ಕಬಳ್ಳಾಪುರ ಜಿಲ್ಲೆ, ಇವರ ಪತ್ರ ಸಂಖ್ಯೆ:ಎಲ್ .ಎನ್.ಡಿ /ಸಿ.ಆರ್ /131/2023-24 ದಿನಾಂಕ:21.07.2025
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗರವರ ಪತ್ರ ಸಂಖ್ಯೆ: RCB/LND/CR/124/2024-25 ದಿನಾಂಕ:25.09.2025.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.(1) ರಲ್ಲಿ ಶ್ರೀ ಆದಿಜಾಂಬವ ಮಹಾಗುರು ಸಂಸ್ಥಾನ ಮಠ ಟ್ರಸ್ಟ್ ರವರು ದಿನಾಂಕ: 04.12.2025 ರಂದು ಸಲ್ಲಿಸಿರುವ ಮನವಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ದೊಡ್ಡಕುರುಬರಹಳ್ಳಿ ಗ್ರಾಮದ ಸ.ನಂ 96 ರಲ್ಲಿ ಜಮೀನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮುಂದುವರೆದು, ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ದೊಡ್ಡಕುರುಬರಹಳ್ಳಿ ಗ್ರಾಮದ ಸ.ನಂ 96 ರ ಆಕಾರ್ ಬಂದ್‌ನಂತೆ ಒಟ್ಟು ವಿಸ್ತೀರ್ಣ 34-10 ಎಕರೆ/ಗುಂಟೆ ಎಂದು ನಮೂದಿದ್ದು, ಪಹಣಿಯಂತೆ ಸರ್ಕಾರಿ ಎಂದು ನಮೂದಾಗಿರುತ್ತದೆ. ಮೋಜಿಣಿ ದಾಖಲೆಗಳಂತೆ ಈ ಜಮೀನು "ಸರ್ಕಾರಿ ಖರಾಬು" ಎಂದು ವರ್ಗೀಕೃತವಾಗಿರುತ್ತದೆ. ಸದರಿ ಸ.ನಂ 96 ರಲ್ಲಿ 3-00 ಎ/ಗು ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಉಚಿತ ವಿದ್ಯಾಭ್ಯಾಸ ಮತ್ತು ವಸತಿ ನಿಲಯ ಹಾಗೂ ಸಾರ್ವಜನಿಕ ಶೈಕ್ಷಣಿಕ ಉದ್ದೇಶಕ್ಕಾಗಿ ಅಧ್ಯಕ್ಷರು, ಶ್ರೀ ಆದಿಜಾಂಬವ ಮಹಾಗುರು ಸಂಸ್ಥಾನ ಮಠ ಟ್ರಸ್ಟ್ ಹೊದಲಿ ಗ್ರಾಮ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, ರವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 21 ಮತ್ತು 22(ಎ)(1)(i) ರ ಕ್ರ.ಸಂ.03 ರನ್ವಯ ಮಂಜೂರು ಮಾಡುವ ಕುರಿತು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(2) ರ ವರದಿಯಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರು, ಪ್ರಸ್ತಾಪಿತ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 19(1)(ಡಿ) ರಡಿ ನಿಗಧಿತ ಗುತ್ತಿಗೆ ಅವಧಿ ಮತ್ತು ವಾರ್ಷಿಕ ಗುತ್ತಿಗೆ ದರ ನಿಗಧಿಪಡಿಸಿ ಶೈಕ್ಷಣಿಕ ಉದ್ದೇಶಕ್ಕಾಗಿ ಷರತ್ತುಗಳಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ನೀಡಲು ಪರಿಗಣಿಸಬಹುದಾಗಿರುತ್ತದೆಂಬ ಅಂಶದೊಂದಿಗೆ ವರದಿ ಸಲ್ಲಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ಜಿಲ್ಲಾಧಿಕಾರಿ ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. E-Comp. No.:1989426 File No.:RD-LGK/53/2025
ಬೆಂಗಳೂರು ದಿನಾಂಕ: 19.02.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ದೊಡ್ಡಕುರುಬರಹಳ್ಳಿ ಗ್ರಾಮದ ಸ.ನಂ 96 ರಲ್ಲಿ 3-00 ಎಕರೆ-ಗುಂಟೆ ಜಮೀನನ್ನು ಪರಿಶಿಷ್ಟ ಜಾತಿ ಸಮುದಾಯದವರ ಶೈಕ್ಷಣಿಕ ಉದ್ದೇಶಕ್ಕಾಗಿ ಕೋರಿರುವುದರಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 27 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 22–ಎ(1) ಕೋಷ್ಟಕದ ಕ್ರಮ ಸಂಖ್ಯೆ(2) ಅನ್ನು ಸಡಿಲಿಸಿ, ಪ್ರಸ್ತಾಪಿತ ಜಮೀನಿನ ಕೃಷಿ ಮಾರ್ಗಸೂಚಿ ಮೌಲ್ಯದ ಶೇಕಡ10% ರಷ್ಟು ಮೌಲ್ಯ ಹಾಗೂ ಇನ್ನಿತರೆ ಶಾಸನಬದ್ಧ ಶುಲ್ಕ ವಿಧಿಸಿ, ಶೈಕ್ಷಣಿಕ ಉದ್ದೇಶಕ್ಕಾಗಿ ಶ್ರೀ ಆದಿಜಾಂಬವ ಮಹಾಗುರು ಸಂಸ್ಥಾನ ಮಠ ಟ್ರಸ್ಟ್ (ರಿ) ಹೊದಲಿ ಗ್ರಾಮ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, ಇವರಿಗೆ ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಷರತ್ತುಗಳು:-

1. ಮಂಜೂರಾದ ಜಮೀನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು;
2. ಟ್ರಸ್ಟ್ ಗೆ ಸದರಿ ಜಮೀನು ಅವಶ್ಯವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು;
3. ಮಂಜೂರಾದ ಜಮೀನನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಹಾಗೂ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು;
4. ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ಉಪಗುತ್ತಿಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು;
5. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಾಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು;
6. ಮಂಜೂರಾತಿ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದರೆ ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ;
7. ಮಂಜೂರಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ, ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ;
8. ಮಂಜೂರಾದ ಜಮೀನು 1969 ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರತಕ್ಕದ್ದು. ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು;
9. ಮಂಜೂರಾದ ಜಮೀನನ್ನು ಹಸ್ತಾಂತರಿಸುವಾಗ ಜಮೀನಿನ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ಜಿಲ್ಲಾಧಿಕಾರಿಗಳು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ;

ಈ ಆದೇಶವನ್ನು ದಿನಾಂಕ:05.02.2026 ರಂದು ಜರುಗಿದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಸಂಶಾ(ಸಿ).88/2026 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(**ಮಹಾಂತಯ್ಯ ಎಸ್‌ಹೊಸಮಠ**)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-193

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮಂಡ್ಯ ಜಿಲ್ಲಾ ಕುರುಬರ ಸಂಘ, ಮಂಡ್ಯ ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :- ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಆರ್.ಸಿ.ಎಸ್: ಐಸಿಡಿಪಿ:ಸಂ.ಸಂ-1:23: 2026-27, ದಿನಾಂಕ:13.05.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರದಲ್ಲಿ ಮಂಡ್ಯ ಜಿಲ್ಲಾ ಕುರುಬರ ಸಂಘ, ಮಂಡ್ಯ ಈ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಅಸ್ತಿತ್ವದಲ್ಲಿರುವ ಸಮಿತಿಯು ತನ್ನ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ್ದು, ದಿನಾಂಕ:28/12/2025 ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 08 ರಲ್ಲಿ ಪ್ರಸ್ತುತವಿರುವ ಕಾರ್ಯನಿರ್ವಾಹಕ ಮಂಡಳಿಯನ್ನು ಮುಂದುವರೆಸಲು ತೀರ್ಮಾನಿಸಿರುವ ಸಂಬಂಧ ಶ್ರೀ ಎ.ಕೃಷ್ಣ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ:12057/2026 ನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:17/04/2026 ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

> In the meanwhile, this Court deems it appropriate to direct respondent No.2 to forthwith secure the entire records pertaining to respondent No.3 Association and examine, as a preliminary issue whether the tenure of the existing Committee has in fact expired. In the event it is found that the tenure has come to an end, respondent No.2 shall take necessary steps to ensure that the process of convening the General Body Meeting and conducting fresh elections is initiated and completed strictly in accordance with law, without permitting any unauthorized continuation of the outgoing Committee.

ನ್ಯಾಯಾಲಯದ ಆದೇಶದ ರೀತ್ಯ ಕಾರ್ಯಕಾರಿ ಸಮಿತಿ ಅಧಿಕಾರ ಅವಧಿ ವಾಸ್ತವವಾಗಿ ಮುಗಿದಿದೆಯೇ ಎಂಬುದರ ಬಗ್ಗೆ ಪರಿಶೀಲಿಸಿ ಅಧಿಕಾರಾವಧಿಯು ಅಂತ್ಯಗೊಂಡಿದೆ ಎಂದು ಕಂಡುಬಂದಲ್ಲಿ ಸಾಮಾನ್ಯ ಸಭೆಯನ್ನು ಕರೆಯುವ ಮತ್ತು ಹೊಸ ಚುನಾವಣೆ ನಡೆಸುವ

ಪ್ರಕ್ರಿಯೆಯನ್ನು ಕಾನೂನಿನ ಪ್ರಕಾರ ಕಟ್ಟುನಿಟ್ಟಾಗಿ ಪೂರ್ಣಗೊಳಿಸಿ, ಅಗತ್ಯ ಕ್ರಮಕ್ಕೆಗೊಳ್ಳಲು ಸಹಕಾರ ಸಂಘಗಳ ಉಪನಿಬಂಧಕರು, ಮಂಡ್ಯ ಜಿಲ್ಲೆ ಇವರಿಗೆ ನಿರ್ದೇಶಿಸಿರುವುದರಿಂದ ಹಿಂದಿನ ಅವಧಿಯ ಕಾರ್ಯಕಾರಿ ಸಮಿತಿಯು ಆಯ್ಕೆಯಾಗಿರುವ ಸಂಬಂಧ ಎಲ್ಲಾ ಮೂಲ ದಾಖಲೆಗಳನ್ನು ಮತ್ತು ಸಂಘದ ಬೈಲಾ ದೃಢೀಕೃತ ಪ್ರತಿಯನ್ನು ದಿನಾಂಕ:30/04/2026 ರಂದು ಖುದ್ದು ಸಲ್ಲಿಸುವಂತೆ ಸಂಘದ ಕಾರ್ಯದರ್ಶಿಯವರಿಗೆ ತಿಳಿಸಿರುವುದಾಗಿ, ಅದರಂತೆ, ದಿನಾಂಕ:30/04/2026 ರಂದು ಸಂಘದ ಪ್ರಧಾನ ಕಾರ್ಯದರ್ಶಿ ಇವರು ಕೋರಲಾದ ದಾಖಲೆಗಳನ್ನು ಸಲ್ಲಿಸಿದ್ದು, ಸದರಿ ದಾಖಲೆಗಳನ್ನು ಅವಲೋಕಿಸಲಾಗಿ, ಈ ಹಿಂದೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಯನ್ನು ದಿನಾಂಕ:21/02/2021 ರಂದು ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ದಿನಾಂಕ:06/03/2021 ರಂದು ಜರುಗಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಿದ್ದು, ದಿನಾಂಕ:28/12/2026 ರಂದು ನಡೆದ ಸಂಘದ ಸಾಮಾನ್ಯ ಸಭೆಯ ನಡವಳಿಯ ವಿಷಯ ಸಂಖ್ಯೆ 08 ರಲ್ಲಿ ಪ್ರಸ್ತುತವಿರುವ ಕಾರ್ಯನಿರ್ವಾಹಕ ಮಂಡಳಿಯ ಮುಂದುವರಿಕೆ ಬಗ್ಗೆ ವಿಷಯವನ್ನು ಮಂಡಿಸಿದ್ದು, ಸಂಘದ ಅಭಿವೃದ್ಧಿ ಮತ್ತು ಕಾಮಗಾರಿ ಪ್ರಗತಿ ಹಂತದಲ್ಲಿರುವುದರಿಂದ ಬಹುಮತದಿಂದ ಪ್ರಸ್ತುತವಿರುವ ಕಾರ್ಯನಿರ್ವಾಹಕ ಮಂಡಳಿಯನ್ನು ಮುಂದುವರಿಯಲು ತೀರ್ಮಾನಿಸಿರುವುದು ಕಂಡುಬಂದಿರುವುದಾಗಿ, ಸಂಘದ ಪ್ರಧಾನ ಕಾರ್ಯದರ್ಶಿಯು ಸಲ್ಲಿಸಿರುವ ದಾಖಲೆಗಳಂತೆ ಸಂಘದ ಕಾರ್ಯಕಾರಿ ಸಮಿತಿ ಅಧಿಕಾರ ಅವಧಿಯು ದಿನಾಂಕ:20/02/2026 ರಂದು ಮುಕ್ತಾಯಗೊಂಡಿದ್ದು, ಸಂಘದ ಬೈಲಾ ಸಂಖ್ಯೆ 07, 10 ಮತ್ತು 12 ರಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರನ್ನು ವಾರ್ಷಿಕ ಮಹಾಸಭೆಯಲ್ಲಿ 5 ವರ್ಷಕ್ಕೆ ಒಂದು ಬಾರಿಗೆ ಚುನಾವಣೆ ಮೂಲಕ ಆಯ್ಕೆ ಮಾಡತಕ್ಕದ್ದು, ಎಂಬುದಾಗಿದ್ದು, ಪ್ರಸ್ತುತವಿರುವ ಕಾರ್ಯಕಾರಿ ಸಮಿತಿಯನ್ನು ಮುಂದುವರೆಸುವ ಬಗ್ಗೆ ಯಾವುದೇ ಅಂಶವು ಸಂಘದ ಬೈಲಾದಲ್ಲಿ ಇರುವುದು ಕಂಡುಬಂದಿರುವುದಿಲ್ಲ, ಆದ್ದರಿಂದ ದಿನಾಂಕ:28/12/2025 ರಂದು ನಡೆದಿರುವ ಸಂಘದ ವಾರ್ಷಿಕ ಮಹಾಸಭೆಯ ನಡವಳಿಯ ವಿಷಯ ಸಂಖ್ಯೆ 8 ರಲ್ಲಿ ಪ್ರಸ್ತುತವಿರುವ ಕಾರ್ಯನಿರ್ವಾಹಕ ಮಂಡಳಿಯನ್ನು ಮುಂದುವರಿಯಲು ತಿರ್ಮಾನಿಸಿರುವ ಅಂಶವು ಬೈಲಾಗೆ ವಿರುದ್ಧವಾಗಿರುವುದು ಕಂಡುಬಂದಿರುವುದರಿಂದ ಹಾಗೂ ಸಂಘದ ಕಾರ್ಯಕಾರಿ ಮಂಡಳಿಯ ಅಧಿಕಾರ ಅವಧಿಯು ದಿನಾಂಕ:20/02/2026 ರಂದು ಅಂತ್ಯಗೊಂಡಿರುವುದರಿಂದ ಹಾಲಿ ಇರುವ ಕಾರ್ಯಕಾರಿ ಸಮಿತಿಯು ಮುಂದುವರೆಯಲು ನಿಯಮಗಳಲ್ಲಿ ಯಾವುದೇ ಅವಕಾಶವಿರುವುದಿಲ್ಲವಾದ್ದರಿಂದ ಮತ್ತು ಸಂಘದ ಚುನಾವಣೆಯನ್ನು ನಿಯಮಾನುಸಾರ ಸಕಾಲದಲ್ಲಿ ನಡೆಸಬೇಕಾಗಿರುವುದರಿಂದ, ಸಂಘದ ಕಾರ್ಯಕಾರಿ ಮಂಡಳಿಯ ಸ್ಥಾನದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಪ್ರಕರಣ 27-ಎ ರಡಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಮಂಡ್ಯ ಜಿಲ್ಲಾ ಕುರುಬರ ಸಂಘ, ಮಂಡ್ಯ ಈ ಸಂಘದ ಆಡಳಿತ ಮಂಡಳಿಯ ಅವಧಿಯು ದಿನಾಂಕ:20/02/2026 ರಂದು ಅಂತ್ಯಗೊಂಡಿರುವುದರಿಂದ ಸಂಘದ ಬೈಲಾ ಸಂಖ್ಯೆ 07, 10 ಮತ್ತು 12 ರಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರನ್ನು ವಾರ್ಷಿಕ ಮಹಾಸಭೆಯಲ್ಲಿ 5 ವರ್ಷಕ್ಕೆ ಒಂದು ಬಾರಿಗೆ ಚುನಾವಣೆ ಮೂಲಕ ಆಯ್ಕೆ ಮಾಡತಕ್ಕದ್ದು, ಎಂಬುದಾಗಿದ್ದು, ಪ್ರಸ್ತುತವಿರುವ ಕಾರ್ಯಕಾರಿ ಸಮಿತಿಯನ್ನು ಮುಂದುವರೆಸುವ ಬಗ್ಗೆ ಯಾವುದೇ ಅಂಶವು ಸಂಘದ ಬೈಲಾದಲ್ಲಿ ಇಲ್ಲದೇ ಇರುವುದರಿಂದ ಮಂಡ್ಯ ಜಿಲ್ಲಾ ಕುರುಬರ ಸಂಘ, ಮಂಡ್ಯ, ಮಂಡ್ಯ ಜಿಲ್ಲೆ ಈ ಸಂಘಕ್ಕೆ ನಿಯಮಾನುಸಾರ ಚುನಾವಣೆ ನಡೆಸಲು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ) ರನ್ವಯ 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ, ಮಂಡ್ಯ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 113 ಸಿಎಸ್‌ಆರ್ 2026

ಬೆಂಗಳೂರು, ದಿನಾಂಕ: 21ನೇ ಮೇ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಮಂಡ್ಯ ಜಿಲ್ಲಾ ಕುರುಬರ ಸಂಘ, ಮಂಡ್ಯ, ಮಂಡ್ಯ ಜಿಲ್ಲೆ ಈ ಸಂಘಕ್ಕೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪ ವಿಭಾಗ, ಮಂಡ್ಯ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-194

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಇಸ್ಲಾಮಿಕ್ ಮಿಷನ್ ಆಫ್ ಇಂಡಿಯಾ, ನ್ಯಾಷನಲ್ ಪಾರ್ಕ್ ರಸ್ತೆ, ಬೆಂಗಳೂರು ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-

1. ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಆದೇಶ ಸಂಖ್ಯೆ:ಡಿಆರ್‌ಬಿ-4/ಎಸ್.ಒ.ಆರ್/ದೂರು/205(43/2010-11)/2020-21, ದಿನಾಂಕ:22.12.2020.
2. ಸಹಕಾರ ಸಂಘಗಳ ಜಂಟಿ ನಿಬಂಧಕರು ರೇಷ್ಮೆ, ರೇಷ್ಮೆ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ:ಜೆಆರ್/ರೇಷ್ಮೆ/01/2020-21, ದಿನಾಂಕ:18.02.2021.
3. ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಆದೇಶ ಸಂಖ್ಯೆ:ಡಿಆರ್‌ಬಿ-4/ಎಸ್.ಒ.ಆರ್/ದೂರು/205/2020-21, ದಿನಾಂಕ:09.03.2022.
4. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:327/2023 C/W 12499/2021, 21880/2021, 8386/2022ರ ಪ್ರಕರಣಗಳಲ್ಲಿ ದಿನಾಂಕ:17.02.2026ರಂದು ನೀಡಿರುವ ಆದೇಶ.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಸಂಘಗಳ ಜಿಲ್ಲಾ ನೋಂದಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಆದೇಶದಲ್ಲಿ ಇಸ್ಲಾಮಿಕ್ ಮಿಷನ್ ಆಫ್ ಇಂಡಿಯಾ, ನ್ಯಾಷನಲ್ ಪಾರ್ಕ್ ರಸ್ತೆ, ಬೆಂಗಳೂರು ಈ ಸಂಘಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:29576-577/2011ರ ಪ್ರಕರಣಗಳಲ್ಲಿ ನೀಡಿರುವ ಆದೇಶವನ್ನು ಪಾಲಿಸದೇ ಸ್ವಯಂ ಘೋಷಿತ ಪದಾಧಿಕಾರಿಗಳು ನಿಯಮಬಾಹಿರ ಚಟುವಟಿಕೆಗಳನ್ನು ನಡೆಸಿ ಸಂಘದ ಆಸ್ತಿ ಪಾಸ್ತಿಗೆ ಹಾನಿ ಉಂಟು ಮಾಡುತ್ತಿದ್ದಾರೆಂದು ಹಾಗೂ ನೈಜ ಸಮಿತಿಯನ್ನು ಗುರುತಿಸಿ ಸಂಘದ ಚಟುವಟಿಕೆಗಳನ್ನು ನಿಯಮಾನುಸಾರ ನಡೆಸಲು ಕ್ರಮವಹಿಸುವ ಬಗ್ಗೆ ಶ್ರೀ ಶಬೀರ್‌ಖಾನ್ ಮತ್ತು ಇತರರು ದೂರು ಸಲ್ಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-25ರಡಿ ವಿಚಾರಣೆ ನಡೆಸಿ ದಿನಾಂಕ:22.12.2020ರಂದು ಅಡಾಕ್ ಕಮಿಟಿಯ ಎದುರು ಅರ್ಜಿದಾರರುಗಳೆಲ್ಲರೂ ಮಿಷನ್‌ನ ಸದಸ್ಯರುಗಳಲ್ಲವೆಂದು ತೀರ್ಮಾನಿಸಿ, ಅರ್ಜಿದಾರರು ಸಲ್ಲಿಸಿದ 1979-80 ರಿಂದ 2019-20 ರವರೆಗಿನ 40 ವರ್ಷಗಳ ಸುದೀರ್ಘ ಲೆಕ್ಕಪತ್ರಗಳು ಹಾಗೂ ಶ್ರೀ ಸೈಯದ್ ಅಸಾದುಲ್ಲಾ ಅಧ್ಯಕ್ಷರು ಮತ್ತು ಶ್ರೀ ಎ.ಸಮದ್ ಖಾನ್ ಕಾರ್ಯದರ್ಶಿ, ಒಳಗೊಂಡ 9 ಜನರ ಕಾರ್ಯಕಾರಿ ಸಮಿತಿಯ ಪಟ್ಟಿಯನ್ನು ಅನುಮೋದಿಸಿ ಕಾರ್ಯಕಾರಿ ಸಮಿತಿಯು ಮಿಷನ್‌ನ ಆಡಳಿತಾತ್ಮಕ ಅಧಿಕಾರವನ್ನು ಪಡೆದು ಕಾರ್ಯನಿರ್ವಹಿಸತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:12499/2021ನ್ನು ದಾಖಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಶ್ರೀ ಅಕ್ಕಲುದ್ದೀನ್ ಇವರು ಸಲ್ಲಿಸಿರುವ ದೂರರ್ಜಿಯ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸಂಘದ ಲೆಕ್ಕಪತ್ರಗಳನ್ನು 1979-80ರಿಂದ 2020-21ನೇ ಸಾಲಿನವರೆಗೆ ಒಬ್ಬರೇ ಸನ್ನದು ಲೆಕ್ಕಿಗರು ಆಡಿಟ್ ಮಾಡಿರುವುದು, ಸಂಘದ ಉಪನಿಯಮದಲ್ಲಿ 2 ವರ್ಷಕ್ಕೊಮ್ಮೆ ಚುನಾವಣೆಗೆ ಅವಕಾಶ ಇದ್ದಾಗ್ಯೂ ಕೂಡ ಪ್ರತಿವರ್ಷವು ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಯಲ್ಲಿ ದಾಖಲಿಸಿರುವುದು, ಚುನಾವಣೆ ಸಂಬಂಧ ನೋಟೀಸ್‌ಗಳನ್ನು ಸದಸ್ಯರಿಗೆ ನೀಡಿರುವ ಬಗ್ಗೆ ಕಡತದಲ್ಲಿ ದಾಖಲಾತಿಗಳು ಇಲ್ಲದಿರುವುದು, ಸಂಘವು ಒಂದು ದೊಡ್ಡ ಇಂಜಿನಿಯರಿಂಗ್ ಕಾಲೇಜು ಹಾಗೂ ಇತರೆ ವಿದ್ಯಾ ಸಂಸ್ಥೆಯನ್ನು ನಡೆಸುತ್ತಿದ್ದು, ಕೋಟಿಗಟ್ಟಲೆ ಆದಾಯ ಇದ್ದಾಗ್ಯೂ ಸಹ ಕೇವಲ 50 ರಿಂದ 60 ಸಾವಿರ ಆದಾಯವೆಂದು ತೋರಿಸಿರುವುದು. 2016-17 ರಲ್ಲಿ ಕಾರ್ಯದರ್ಶಿಯಾಗಿರುವ ಶ್ರೀ ಸಮದ್ ಖಾನ್ ರವರು 1996-97 ರಿಂದ 1998-99 ರ ವರೆಗಿನ ಸಾಮಾನ್ಯ ಸಭೆಯ ನೋಟೀಸ್‌ಗೆ ಕಾರ್ಯದರ್ಶಿಯೆಂದು ಸಹಿ ಮಾಡಿರುವುದು ಮತ್ತು ಸಾಮಾನ್ಯ ಸಭೆಯ ಹಾಜರಾತಿಯ ಬಗ್ಗೆ ದಾಖಲಾತಿಗಳು ಕಡತದಲ್ಲಿ ಲಭ್ಯವಿಲ್ಲದಿರುವುದರಿಂದ ಸಂಘದ 1979-80 ರಿಂದ 2020-21 ನೇ ಸಾಲಿನವರೆಗಿನ ಲೆಕ್ಕಪತ್ರಗಳು ಹಾಗೂ ವಾರ್ಷಿಕ ಸಾಮಾನ್ಯ ಸಭೆಯ ದಾಖಲಾತಿಗಳು ನೈಜತೆಯಿಂದ ಕೂಡಿರುವುದಿಲ್ಲವೆಂದು ಹಾಗೂ ಕೃತಕವಾಗಿ ಸೃಷ್ಟಿಸಿರುವುದಾಗಿ ಕಂಡುಬರುತ್ತದೆ. ಹಾಗಾಗಿ ಈ ದಾಖಲಾತಿಗಳ ಆಧಾರದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, 4 ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ನೀಡಿರುವ ಸ್ವೀಕೃತಿಪತ್ರ ಸಂಖ್ಯೆ :ವಾಲೆಪ/395/2020-21, ದಿನಾಂಕ:21-12-2020 ರಲ್ಲಿನ ಷರತ್ತುಗಳನ್ವಯ ವಾಪಸ್ಸು ಪಡೆಯಬಹುದಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:21880/2021ನ್ನು ದಾಖಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(3)ರ ಆದೇಶದಲ್ಲಿ ಸದರಿ ಪ್ರಕರಣದಲ್ಲಿ 2ನೇ ಅರ್ಜಿದಾರರಾದ ಶ್ರೀ ಮುಸ್ತಕ್ ಅಹಮದ್ ರವರು ಈ ಮಿಷನ್‌ನಲ್ಲಿ ನೌಕರರಾಗಿದ್ದರಿಂದ ಸದರಿಯವರು ತಮ್ಮ ನೌಕರಿ ಸವಲತ್ತು, ಪಿಂಚಣಿ ಹಾಗೂ ಇತರ ಭತ್ಯೆಗಳಿಗಾಗಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ.4551/2021 (L-RES) ದಾವೆಯನ್ನು ಹಾಕಿದ್ದು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ಸದರಿ ರಿಟ್ ಪಿಟಿಷನ್‌ನಲ್ಲಿ ನೀಡಿರುವ ಆದೇಶದ ಮೇರೆಗೆ ಸದರಿಯವರು ಇಸ್ಲಾಮಿಕ್ ಮಿಷನ್ ಆಫ್ ಇಂಡಿಯಾದಲ್ಲಿ ನೌಕರಿಯಲ್ಲಿರುವುದು ಸಾಬೀತಾಗಿರುತ್ತದೆ. ಮಿಷನ್‌ನ ನೌಕರರಾಗಿದ್ದವರು ಪ್ರಜಾಪ್ರಭುತ್ವದ ತಳಹದಿಯಲ್ಲಿ ಆಯ್ಕೆಯಾದ ಕಾರ್ಯಕಾರಿ ಸಮಿತಿಯ ಅಸ್ತಿತ್ವದ ಬಗ್ಗೆ ಪ್ರಶ್ನಿಸುವ ಅಧಿಕಾರ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಶ್ರೀ ಮುಸ್ತಕ್ ಅಹಮದ್ ರವರನ್ನು 2ನೇ ಅರ್ಜಿದಾರರ ಸ್ಥಾನದಿಂದ ಕೈಬಿಡಲಾಗಿದೆ. ಇವರು ಮಿಷನ್ ಆಡಳಿತಾತ್ಮಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಅಧಿಕಾರ ಹೊಂದಿರುವುದಿಲ್ಲವೆಂದು, 1 ಮತ್ತು 2ನೇ ಎದುರುದಾರರು ದಿ ಇಸ್ಲಾಮಿಕ್ ಮಿಷನ್ ಆಫ್ ಇಂಡಿಯಾ (ಐಎಂಐ) ಹುಳಿಮಾವು ಇದರ ಅಡಾಕ್ ಕಮಿಟಿಯ ಪ್ರಭಾರ ಪದಾಧಿಕಾರಿಗಳಾಗಿದ್ದು ಈ ಮಿಷನ್ ಸದಸ್ಯರಾಗಿರುವುದಕ್ಕೆ ದಾಖಲೆ ಸಲ್ಲಿಸಲು ವಿಫಲರಾಗಿರುತ್ತಾರೆ ಹಾಗೂ ಆದೇಶ ದಿನಾಂಕ:22-12-2020 ರಲ್ಲಿ ಆದೇಶಿದಂತೆ ಹಾಗೂ ದಿನಾಂಕ:25-4-2021ರ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆಯಾದ ಕಾರ್ಯಕಾರಿ ಸಮಿತಿಯು ಅಸ್ತಿತ್ವದಲ್ಲಿರುವುದರಿಂದ 1 ಮತ್ತು 2 ನೇ ಎದುರುದಾರರ ಅಡ್ಹಾಕ್ ಕಮಿಟಿಯು ಅಸ್ತಿತ್ವವಿರುವುದಿಲ್ಲವೆಂದು ತೀರ್ಮಾನಿಸಿದೆ. 4ನೇ ಎದುರುದಾರರರು, ಈ ಮಿಷನ್‌ನಲ್ಲಿ ಸದಸ್ಯರಾಗಿರುವುದಕ್ಕೆ ಯಾವುದೇ ದಾಖಲೆಯನ್ನು ವಿಚಾರಣೆ ಸಮಯದಲ್ಲಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಇವರನ್ನು 4ನೇ ಎದುರು ಅರ್ಜಿದಾರರನ್ನಾಗಿ ಸೇರಿಸಲು ಹಾಗು ಅವರ ಅರ್ಜಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ವಿಚಾರಣೆಗೆ ಒಳಪಡಿಸಲು

ಸಾಧ್ಯವಿಲ್ಲವೆಂದು ತೀರ್ಮಾನಿಸಿದೆ. 5ನೇ ಎದುರುದಾರರು, 3ನೇ ಎದುರುದಾರ, 1ನೇ ಅರ್ಜಿದಾರ ಮತ್ತು ಮಹಮ್ಮದ್ ಖಾಲಿದ್ ಪಾಷಾ ಇವರುಗಳನ್ನು ಮಿಷನ್‌ಗೆ ಮೋಸ ಮಾಡಿರುವ ಮೇರೆಗೆ ಈ ಮೂರು ಜನರಿಗೆ ದಿನಾಂಕ:18-03-2021 ರಂದು ನೊಂದಣಿ ಅಂಚೆ ಮೂಲಕ ನೋಟಿಸ್ ಜಾರಿ ಮಾಡಿ ಸದಸ್ಯತ್ವದಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ ಎಂದು ಹೇಳಿರುವುದಕ್ಕೆ ಯಾವುದೇ ಧೃಢೀಕರಿಸುವಂತಹ ಮೂಲ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. 3ನೇ ಎದುರುದಾರರು ಸಲ್ಲಿಸಿರುವ ಮೂಲ ನಡವಳಿ ಪುಸ್ತಕದಂತೆ ದಿನಾಂಕ:06-03-2021 ರಿಂದಲೇ 5ನೇ ಎದುರುದಾರರು ಈ ಮಿಷನ್ ಅಧ್ಯಕ್ಷರಾಗಿ ಮುಂದುವರೆಯದ ಕಾರಣ 5ನೇ ಎದುರುದಾರರ ಅಧ್ಯಕ್ಷತೆಯಲ್ಲಿ ದಿನಾಂಕ:18-3-2021 ರಂದು ನೀಡಿದ ನೋಟಿಸು ಅಥವಾ ನಿರ್ಣಯಗಳು ಅನೂರ್ಜಿತವಾಗಿರುತ್ತವೆ. ಶಾಶ್ವತವಾಗಿ ಸದಸ್ಯತ್ವವನ್ನು ರದ್ದುಗೊಳಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರುವುದಿಲ್ಲವಾದ್ದರಿಂದ ಅರ್ಜಿದಾರರನ್ನಾಗಿ ಸೇರಿಸಲು ಹಾಗೂ ಅವರ ಅರ್ಜಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ವಿಚಾರಣೆಗೆ ಒಳಪಡಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದೆ. ದಾಖಲೆಗಳ ಪ್ರಕಾರ ಪದಾಧಿಕಾರಿಗಳು 2021 ರಿಂದ 2023ನೇ ಸಾಲಿನ ಆಡಳಿತ ಮಂಡಳಿಗೆ ದಿನಾಂಕ:25-4-2021 ರಂದು ಕರೆದಿರುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚುನಾಯಿತರಾಗಿದ್ದು, ಸದರಿ ಪದಾಧಿಕಾರಿಗಳು 2021-23ನೇ ಸಾಲಿಗೆ ಚುನಾಯಿತರಾಗಿದ್ದು, ಇವರು ಅಧಿಕೃತವಾಗಿ ಮುಂದುವರೆದಿರುತ್ತಾರೆಂದು ಆದೇಶಿಸಿರುತ್ತಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:8386/2022 ಮತ್ತು 327/2023 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (4)ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಇಸ್ಲಾಮಿಕ್ ಮಿಷನ್ ಆಫ್ ಇಂಡಿಯಾ, ನ್ಯಾಷನಲ್ ಪಾರ್ಕ್ ರಸ್ತೆ, ಬೆಂಗಳೂರು ಈ ಸಂಘಕ್ಕೆ ಸಂಬಂಧಪಟ್ಟಂತೆ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನು ಪರಿಗಣಿಸಿ ದಿನಾಂಕ:17.02.2026ರಂದು ಮೇಲೆ ಓದಲಾದ ಕ್ರಮಾಂಕ (1) ರಿಂದ (3)ರ ಆದೇಶ/ ವರದಿಯನ್ನು ವಜಾಗೊಳಿಸಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

iii. It is made clear that this Court has not expressed its opinion in any manner on the merits of the claims made by either of the parties. All contentions are kept open to be urged before the competent Court of Civil jurisdiction in accordance with law.

iv. In view of the submission made by the learned Additional Advocate General with regard to safeguarding the property and having regard to the overall facts and circumstances of the case, the respondent-State is directed to pass appropriate orders as provided under Section 27A of the Karnataka Societies Registration Act for appointment of Administrator with regard to the affairs of the Society and also its movable and immovable properties which belonged and in possession of the Society and manage and protect the same till such time as it deems fit in accordance with law.

ಮಾನ್ಯ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿ, ಇಸ್ಲಾಮಿಕ್ ಮಿಷನ್ ಆಫ್ ಇಂಡಿಯಾ, ನ್ಯಾಷನಲ್ ಪಾರ್ಕ್ ರಸ್ತೆ, ಬೆಂಗಳೂರು ಈ ಸಂಘದ ಆಡಳಿತದ ಸುಗಮ ನಿರ್ವಹಣೆಗೆ

ಹಾಗೂ ಸಂಘದ ಚರ ಮತ್ತು ಸ್ಥಿರಾಸ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲ-27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 119 ಸಿಎಸ್‌ಆರ್ 2024

ಬೆಂಗಳೂರು, ದಿನಾಂಕ: 22ನೇ ಮೇ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಇಸ್ಲಾಮಿಕ್ ಮಿಷನ್ ಆಫ್ ಇಂಡಿಯಾ, ನ್ಯಾಷನಲ್ ಪಾರ್ಕ್ ರಸ್ತೆ, ಬೆಂಗಳೂರು ಈ ಸಂಘಕ್ಕೆ ಶ್ರೀ ಅನ್ವರ್ ಪಾಷಾ, ನಿವೃತ್ತ ಐ.ಎ.ಎಸ್ ಅಧಿಕಾರಿ ಹಾಗೂ ಸಮಾಲೋಚಕರು(Consultant), ಕೌಶಲ್ಯಾಭಿವೃದ್ಧಿ ಇಲಾಖೆ, ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘದ ಆಡಳಿತದ ಸುಗಮ ನಿರ್ವಹಣೆ ಹಾಗೂ ಸಂಘದ ಚರ ಮತ್ತು ಸ್ಥಿರಾಸ್ತಿಗಳನ್ನು ರಕ್ಷಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-195

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬಳ್ಳಾರಿ ಜಿಲ್ಲೆಯ ಸಂಡೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಮೂರು (03) ನೋಟರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಅಧ್ಯಕ್ಷರು, ಸಂಡೂರು ವಕೀಲರ ಸಂಘ, ಸಂಡೂರು, ಬಳ್ಳಾರಿ ಜಿಲ್ಲೆ ಇವರ ದಿನಾಂಕ : 26-09-2025ರ ಮನವಿ.
2. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: 335/2026/ಆಡಳಿತ, ದಿನಾಂಕ : 20-01-2026.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ದಿನಾಂಕ : 26-09-2025ರ ಮನವಿಯಲ್ಲಿ ಸಂಡೂರು ತಾಲ್ಲೂಕು ಕೈಗಾರಿಕಾ ಪ್ರದೇಶವಾಗಿರುವುದರಿಂದ ಮತ್ತು ವಿವಿಧ ಹಳ್ಳಿಗಳಿಂದ ಮಾನ್ಯ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳ ನೋಟರಿಗಾಗಿ ಬರುತ್ತಿದ್ದು, ನೋಟರಿಗಳ ಕೊರತೆಯಿಂದಾಗಿ ಹಳ್ಳಿಗಳಿಂದ ಬರುವಂತ ಕಕ್ಷಿದಾರರಿಗೆ ಮತ್ತು ನಾಗರಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ, ಸದರಿ ತೊಂದರೆ ನಿವಾರಣೆಗಾಗಿ ಹೆಚ್ಚುವರಿಯಾಗಿ ಇನ್ನೂ ಮೂರು ಜನ ನೋಟರಿಯವರನ್ನು ತಕ್ಷಣ ನೇಮಕ ಮಾಡಬೇಕೆಂದು ಮನವಿಯಲ್ಲಿ ಕೋರಿರುತ್ತಾರೆ.

ಬಳ್ಳಾರಿ ಜಿಲ್ಲೆಯ ಸಂಡೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸವ ಬಗ್ಗೆ ಪರಿಶೀಲಿಸಲು, ಕೆಲವು ಮಾಹಿತಿಯನ್ನು ಹಾಗೂ ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ : 20-01-2026 ರ ಪತ್ರದಲ್ಲಿ ಸಂಡೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಅವಶ್ಯಕತೆ ಇದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರ ಪತ್ರದಲ್ಲಿನ ಅಭಿಪ್ರಾಯ ಹಾಗೂ ಅಧ್ಯಕ್ಷರು, ಸಂಡೂರು ವಕೀಲರ ಸಂಘ, ಸಂಡೂರು, ಬಳ್ಳಾರಿ ಜಿಲ್ಲೆ ಇವರು ಸಲ್ಲಿಸಿರುವ ಮನವಿಯನ್ವಯ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಸಂಡೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ನೋಟರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/357/2025,
ಬೆಂಗಳೂರು, ದಿನಾಂಕ : 20-05-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಬಳ್ಳಾರಿ ಜಿಲ್ಲೆಯ ಸಂಡೂರು ಕಂದಾಯ ತಾಲ್ಲೂಕಿಗೆ** ಹೆಚ್ಚುವರಿಯಾಗಿ ಮೂರು **(03)** ನೋಟರಿ ಹುದ್ದೆಗಳನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-196

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 02 ಸೇಹಿಮ 2026

ಕರ್ನಾಟಕ ಸರ್ಕಾರ ಸಚಿವಾಲಯ.
ವಿಧಾನಸೌಧ
ಡಾ|| ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು ದಿನಾಂಕ:25.05.2026

ಸೇರ್ಪಡೆ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2026, ದಿನಾಂಕ: 13.05.2026ರ ಕಂಡಿಕೆ (3)ರಲ್ಲಿರುವ ಅಂಶಗಳ ನಂತರದಲ್ಲಿ ಈ ಕೆಳಕಂಡ ಅಂಶಗಳನ್ನು ಸೇರ್ಪಡೆಗೊಳಿಸಿ ಓದಿಕೊಳ್ಳತಕ್ಕದ್ದೆಂದು ಆದೇಶಿಸಿದೆ:-

- ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿಯನ್ನು ಮೊದಲನೆಯ ಬಾರಿಗೆ ಅನುಷ್ಠಾನಗೊಳಿಸುವ ಇಲಾಖೆಗಳು ಅನುಬಂಧ-2 ರಲ್ಲಿರುವ 60 ಬಿಂದುಗಳ ರೋಸ್ಟರ್‌ನ ಕಾಲಂ ಸಂಖ್ಯೆ (2)ರ ಮೊದಲನೇ ಬಿಂದುವಿನಿಂದ ಹೊಸದಾಗಿ ಪ್ರಾರಂಭಿಸತಕ್ಕದ್ದು.
- ಯಾವುದೇ ಇಲಾಖೆಯಲ್ಲಿ ಈಗಾಗಲೇ ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ನೇಮಕಾತಿಗಳನ್ನು ಮಾಡಿಕೊಂಡಿದ್ದಲ್ಲಿ ಈಗಾಗಲೇ ನೀಡಿರುವ ಒಳ ಮೀಸಲಾತಿ ಬಿಂದುಗಳನ್ನು ಅನುಬಂಧ-2ರಲ್ಲಿರುವ 60 ಬಿಂದುಗಳ ರೋಸ್ಟರಿಗೆ ಅಳವಡಿಸಿಕೊಂಡು ಮುಂದಿನ ಬಿಂದುವಿನಿಂದ ಪ್ರಾರಂಭಿಸತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

- ತದನಂತರ, ಮುಂದಿನ ಪ್ರತಿ ನೇಮಕಾತಿ ಅಧಿಸೂಚನೆಗಳಲ್ಲಿ ಪರಿಶಿಷ್ಟ ಜಾತಿಗೆ 3 ಅಥವಾ 3 ಕ್ಕಿಂತ ಹೆಚ್ಚು ಹುದ್ದೆಗಳು ಲಭ್ಯವಾಗುವ ಎಲ್ಲಾ ಸಂದರ್ಭ/ಪ್ರಕರಣಗಳಲ್ಲಿ ಮಾತ್ರ ಹಿಂದಿನ ನೇಮಕಾತಿ ಅಧಿಸೂಚನೆಯಲ್ಲಿ ಯಾವ ಬಿಂದುವಿನಲ್ಲಿ ಅಂತ್ಯಗೊಂಡಿರುತ್ತದೆಯೋ ಅದರ ನಂತರದ ಬಿಂದುವಿನಿಂದ 60ನೇ ಬಿಂದುವಿನವರೆಗೆ ಮುಂದುವರೆಸತಕ್ಕದ್ದು.

- ಅನುಬಂಧ-2ರಲ್ಲಿರುವ ಕಾಲಂ-1 ರಲ್ಲಿ ಉಲ್ಲೇಖಿಸಿರುವ ಬಿಂದುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಆಶಾ ಕುಮಾರಿ ಎ. ಜೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

PR-197

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH